## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ರವರು ಶೂನ್ಯವೇಳೆಯಲ್ಲಿ ಮಂಡಿಸಿರುವ ಪ್ರಸ್ತಾವನೆಗೆ ಉತ್ತರ

ಪ್ರಶ್ನೆ

ಮೈಸೂರು ಜಿಲ್ಲೆಯ ಟಿ.ನರಸೀಪುರದಲ್ಲಿ ನಡೆದಿರುವ ಯುವಕ ವೇಣುಗೋಪಾಲ್ ನಾಯಕ್ ದಿಗ್ಭ್ರಮೆ ಮೂಡಿಸಿದೆ. 31 ವರ್ಷದ ವೇಣುಗೋಪಾಲ್, ರಾಷ್ಟ್ರಪ್ರೇಮಿ ಸಂಘಟನೆಯಾದ ಯುವ ಬ್ರಿಗೇಡ್‌ನ ತಾಲ್ಲೂಕು ಅಧ್ಯಕ್ಷನಾಗಿ ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡಿರುತ್ತಾನೆ. ಜುಲೈ 8ನೇ ಶನಿವಾರ ಹನುಮನ ಜಯಂತಿ ಮೆರವಣಿಗೆ ವೇಳೆ, ಮೆರವಣಿಗೆ ನೇತೃತ್ವವಹಿಸಿರುವ ವೇಣುಗೋಪಾಲ್‌ರವರಿಗೆ ವಿನಾಕಾರಣ ಕಿರುಕುಳ ನೀಡಿ ಸಂಚು ರೂಪಿಸಿದ್ದರು. ಹನುಮ ಜಯಂತಿ ಕಾರ್ಯಕ್ರಮಕ್ಕೂ ಮುನ್ನ ಉತ್ಸವದ ಮೆರವಣಿಗೆ ಸಿದ್ಧಪಡಿಸುವ ವೇಳೆ, ಕೊಲೆಗಡುಕರು ಹನುಮ ಜಯಂತಿಯ ಉತ್ಸವವನ್ನು ನಿಲ್ಲಿಸುವ ಬೆದರಿಕೆ ಒಡ್ಡಿದ್ದರು. ಮರುದಿನ ಭಾನುವಾರ ವೇಣುಗೋಪಾಲ್ ನಾಯಕ್‌ರನ್ನು ಸಂಧಾನದ ನೆಪದಲ್ಲಿ ಕರೆಸಿಕೊಂಡು ಕೊಲೆಗಾರರು ಚಾಕು, ಬಾಟಲಿ, ಮಾರಕಾಸ್ತ್ರಗಳಿಂದ ಇರಿದು ಕೊಲೆಗೈದಿದ್ದರು.

ಯುವ ಬ್ರಿಗೇಡ್ ಕಾರ್ಯಕರ್ತನ ಹತ್ಯೆಯನ್ನು ಖಂಡಿಸಿ ಟಿ.ನರಸೀಪುರದ ಕೆಲವು ಭಾಗಗಳಲ್ಲಿ ಸಾರ್ವಜನಿಕರು ಹಾಗೂ ವ್ಯಾಪರಸ್ಥರು ಸ್ವಯಂ ಪ್ರೇರಿತ ಬಂದ್ ನಡೆಸಿದ್ದರು. ಮೃತ ವೇಣುಗೋಪಾಲ್ ನಾಯಕ್ ಪರಿಶಿಷ್ಠ ಪಂಗಡದ ಸಮುದಾಯಕ್ಕೆ ಸೇರಿದ್ದು ಹನುಮ ಭಕ್ತನಾಗಿ ವರ್ಷಂಪ್ರತಿ ಹನುಮ ಜಯಂತಿ ಆಚರಣೆಗೆ ಮೂಂಚುಣಿಯಲ್ಲಿರುತ್ತಿದ್ದರು.

ಸಂಕಟದ ವಿಷಯವೇನೆಂದರೆ ಹೊಸ ಸರ್ಕಾರ ಬರುತ್ತಿದ್ದಂತೆ ಬೆಳಗಾವಿಯಲ್ಲಿ ಜೈನ ಮುನಿಯ ಭೀಕರ ಹತ್ಯೆ ಹಾಗೂ ಮುಖ್ಯಮಂತ್ರಿಯವರ ತವರು ಜಿಲ್ಲೆಯಾದ ಮೈಸೂರು ಜಿಲ್ಲೆ ಟಿ.ನರಸೀಪುರದಲ್ಲಿ ವೇಣುಗೋಪಾಲ್ ನಾಯಕ್‌ನ ಕೊಲೆ ಈಡೀ ರಾಜ್ಯದ ಜನತೆಯನ್ನು ಆತಂಕಕ್ಕೀಡುಮಾಡಿದೆ. ಹೊಸ ಸರ್ಕಾರ ಕಾನೂನು ಸುವ್ಯವಸ್ಥೆ ಕಾಪಾಡಲು ಸಂಪೂರ್ಣ ವಿಫಲವಾಗಿದೆ. ಶನಿವಾರ ಘಟನೆ ನಡೆದಿದ್ದನ್ನು ಪೊಲೀಸರು ಗಮನಿಸಿದ್ದು, ಕನಿಷ್ಠ ಎಚ್ಚರಿಕೆ ವಹಿಸಿದ್ದರೂ ಈ ಕೊಲೆಯನ್ನು ತಡೆಯಬಹುದಿತ್ತು. ಕೊಲೆ ಪ್ರಕರಣದಿಂದ ಆರೋಪಿಗಳನ್ನು ಮುಕ್ತವಾಗಿಸಲು ಕ್ಷಣಕ್ಕೊಂದು ಸುಳ್ಳು ಸುದ್ದಿಯನ್ನು ಹರಡಿಸಲಾಗುತ್ತಿದೆ. ವರಿಷ್ಠ ಪೊಲೀಸ್ ಅಧಿಕಾರಿಗಳು ನೀಡಿದ ಹೇಳಿಕೆಗೂ ಮೃತರ ಪತ್ನಿಯವರು ನೀಡಿದ ಮಾಧ್ಯಮದ ಹೇಳಿಕೆಗೂ ವ್ಯತಿರಿಕ್ತತೆ ಇದ್ದು ಹಲವು ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ. ತನಿಖೆಯನ್ನು ಯುವ ಬ್ರಿಗೇಡ್ ವಿರೋಧಿಸುವವರು ರಾಜಕಾರಣಗೊಳಿಸಿ ಪ್ರಕರಣದ ತನಿಖೆಯನ್ನು ದಿಕ್ಕು ತಪ್ಪಿಸುವ ಅಪಾಯವಿದೆ ಎಂದು ಮೃತ ಕುಟುಂಬದವರು ಆತಂಕ ವ್ಯಕ್ತಪಡಿಸಿರುತ್ತಾರೆ.

ಸರ್ಕಾರ ಸದರಿ ಪ್ರಕರಣದ ಉನ್ನತ ಮಟ್ಟದ ತನಿಖೆ ನಡೆಸುವಂತೆ ಹಾಗೂ ಮೃತರ ಕುಟುಂಬಕ್ಕೆ 25 ಲಕ್ಷ ಪರಿಹಾರ ನೀಡುವುದರ ಕುರಿತು.

ಉತ್ತರ:

ದಿನಾಂಕ; 09.07.2023 ರಂದು ರಾತ್ರಿ 11.00 ಗಂಟೆಗೆ ಪಿರ್ಯಾದಿ ರಾಮಾನುಜಂ ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ: "ದಿನಾಂಕ:08.07.2022 ರಂದು ಹನುಮ ಜಯಂತಿ ಪ್ರಯುಕ್ತ ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಉತ್ಸವ ಹೊರಡುವ ಗುಂಜನರಸಿಂಹಸ್ವಾಮಿ ದೇವಾಲಯದ ಮುಖ್ಯದ್ವಾರದ ಬಳಿ ಉತ್ಸವ ಮೂರ್ತಿಗಳನ್ನು ಮೆರವಣಿಗೆಗೆ ಸಿದ್ದಪಡಿಸಿದ್ದರು. ಸಾರ್ವಜನಿಕರು ಮತ್ತು ಭಕ್ತಾಧಿಗಳು ದೇವಾಲಯದ ಆವರಣದಲ್ಲಿ ಇದ್ದುದರಿಂದ ದೇವಾಲಯದ ಆವರಣಕ್ಕೆ ವಾಹನಗಳನ್ನು ಬಿಡದಂತೆ ಹೊರಗೆ ನಿಲ್ಲಿಸುವಂತೆ ಫಿರ್ಯಾದಿ ರಾಮಾನುಜಂ ಮತ್ತು ಸಮಿತಿಯ ಸದಸ್ಯರುಗಳು ಸೂಚಿಸುತ್ತಿದ್ದರು. ಮಧ್ಯಾಹ್ನ 1.30 ಗಂಟೆ ಸಮಯದಲ್ಲಿ ಶ್ರೀರಾಂಪುರದ ಮಣಿಕಂಠ, ತಿರುಮಕೂಡಲಿನ ಸಂದೇಶ್ ರವರುಗಳು ಬೈಕ್‌ನಲ್ಲಿ ದೇವಾಲಯದ ಮುಖ್ಯದ್ವಾರದಿಂದ ಒಳಗೆ ಬರುತ್ತಿದ್ದು, ಪಿರ್ಯಾದಿ

ರಾಮಾನುಜಂ ಮತ್ತು ಕಾರ್ಯಕರ್ತರು ಉತ್ಸವ ಮೂರ್ತಿ ಹೊರಗೆ ಹೋಗುವವರೆಗೆ ಯಾವುದೇ ವಾಹನಗಳು ಒಳಗಡೆ ಹೋಗುವುದು ಬೇಡ. ಬೈಕ್‌ಗಳನ್ನು ದೇವಾಲಯದ ಹೊರಗೆ ನಿಲ್ಲಿಸಿ ಎಂದು ಹೇಳಿದರು. ಈ ಕಾರಣಕ್ಕೆ ಕೋಪಗೊಂಡ ಸಂದೇಶ್ ಮತ್ತು ಮಣಿಕಂಠ ರವರು ನಮ್ಮ ಬೈಕ್‌ಗಳನ್ನು ಒಳಗೆ ಬಿಡುತ್ತಿಲ್ಲ. ನೀನು ಅದು ಹೇಗೆ ಹನುಮೋತ್ಸವ ಮಾಡುತ್ತೀರ, ಉತ್ಸವವನ್ನು ಹೇಗೆ ನಿಲ್ಲಿಸಬೇಕೆಂದು ಗೊತ್ತು ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದರು. ರಾಮಾನುಜಂ ಮತ್ತು ವೇಣುಗೋಪಾಲ ಎಂಬುವರು ಇದು ದೇವರ ಉತ್ಸವ ಗಲಾಟೆ ಬೇಡವೆಂದು ಹೇಳಿದಾಗ ಅಷ್ಟರಲ್ಲಿ ಜನರು ಗುಂಪುಗೂಡಿದ್ದು, ಉತ್ಸವ ಮುಗಿಯಲಿ ನಾಳೆ ನಿನ್ನನ್ನು ಮುಗಿಸುತ್ತೇವೆ ಎಂದು ಹೇಳಿ ಸಂದೇಶ್ ಮತ್ತು ಮಣಿಕಂಠ ಉತ್ಸವದಲ್ಲಿ ಸೇರಿಕೊಂಡು ಹೊರಟು ಹೋದರು. ದಿನಾಂಕ:09.07.2023 ರಂದು ಮಧ್ಯಾಹ್ನ 4.00 ಗಂಟೆಗೆ ಪಿರ್ಯಾದಿ ರಾಮಾನುಜಂ ಮತ್ತು ವೇಣುಗೋಪಾಲ ಶಾಮಿಯಾನ ಅಂಗಡಿ ಬಳಿ ಉತ್ಸವಕ್ಕೆ ಬಾಡಿಗೆಗೆ ತಂದಿದ್ದ ವಸ್ತುಗಳನ್ನು ಹಿಂತಿರುಗಿಸುತ್ತಿದ್ದಾಗ ಅಲ್ಲಿಗೆ ಬಂದ ಮಣಿಕಂಠ @ ಕೂಳೆ ಮಣಿ, ಅನಿಲ, ಶಂಕರ @ ತುಪ್ಪ, ಸಂದೇಶ್ ರವರುಗಳು ನಿನ್ನೆ ಉತ್ಸವದ ಸಮಯದಲ್ಲಿ ದೇವಾಲಯದ ಆವರಣಕ್ಕೆ ಬೈಕ್ ಬಿಡದೇ ಇರುವ ವಿಚಾರಗಳನ್ನು ತೆಗೆದು ವೇಣುಗೋಪಾಲನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಿಡಿದು ಎಳೆದಾಡಿ ಬಟ್ಟೆಯನ್ನು ಹರಿದುಹಾಕಿ ತುಟಿಗೆ ರಕ್ತ ಬರುವಂತೆ ಎಲ್ಲರೂ ಸೇರಿ ಹೊಡೆದಿದ್ದು, ಅಷ್ಟರಲ್ಲಿ ಅದೇ ಮಾರ್ಗವಾಗಿ ಪೊಲೀಸ್ ವಾಹನ ಹೋಗಿದ್ದು ಎಲ್ಲರೂ ಹೊರಟು ಹೋಗಿರುತ್ತಾರೆ. ರಾತ್ರಿ 8.15 ಗಂಟೆ ಸಮಯದಲ್ಲಿ ರಾಮಾನುಜಂ, ವೇಣುಗೋಪಾಲ, ಸಂಜಯ್ ಅವರ ಮನೆ ಬಳಿ ಇದ್ದಾಗ, ಮಣಿಕಂಠ ಎಂಬುವನು ವೇಣುಗೋಪಾಲನಿಗೆ ಫೋನ್ ಕರೆ ಮಾಡಿ ಮಾತನಾಡಬೇಕು ಸರ್ವೀಸ್ ಸ್ಟೇಷನ್ ಬಳಿ ಬಾ, ಬಾರದೇ ಇದ್ದರೆ ನಾವುಗಳೇ ನಿಮ್ಮ ಮನೆಯ ಬಳಿ ಬಂದು ಗಲಾಟೆ ಮಾಡುವುದಾಗಿ ಹೇಳಿದ್ದು, ಫೈರ್ ಸ್ಟೇಷನ್ ಮುಂಭಾಗ ಹೋಗುತ್ತಿದ್ದಂತೆ ಮಣಿಕಂಠ, ಅನಿಲ್, ಮಂಜು, ಶಂಕರ, ಹ್ಯಾರಿಸ್, ಸಂದೇಶ್ ಒಟ್ಟಾಗಿ ಗುಂಪುಕಟ್ಟಿಕೊಂಡು ಕೈಗಳಲ್ಲಿ ಮಾರಕಾಸ್ತ್ರ ಹಿಡಿದು ಹೊಡೆಯಲಾರಂಬಿಸಿದ್ದು, ಅನಿಲ್ ಗಾಜಿನ ಬಾಟಲ್‌ನಿಂದ ಮುಖ ಮತ್ತು ತಲೆಗೆ ಹೊಡೆದಿದ್ದು, ಶಂಕರ್ ಚಾಕುವಿನಿಂದ ಹೊಟ್ಟೆಗೆ ಚುಚ್ಚಿರುತ್ತಾನೆ. ಹ್ಯಾರಿಸ್ ಮತ್ತು ಮಂಜು ಗಾಜಿನ ಬಾಟಲಿನ ಚೂರುಗಳಿಂದ ಹೊಡೆದು ನಾವು ಜಗಳ ಬಿಡಿಸಲು ಪ್ರಯತ್ನಿಸಿದ್ದು ರಕ್ತಸ್ರಾವದಿಂದ ಬಿದ್ದಿದ್ದ ವೇಣುಗೋಪಾಲನನ್ನು ಉಪಚರಿಸಿ ಟಿ.ನರಸೀಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ವೈದ್ಯರು ಪರಿಶೀಲಿಸಿ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ" ಎಂಬುದಾಗಿ ನೀಡಿದ ದೂರಿನ ಮೇರೆಗೆ ಟಿ.ನರಸೀಪುರ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ: 173/2023 ಕಲಂ 143, 147, 148, 504, 307, 302 ರೆ/ವಿ 149 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿರುತ್ತದೆ.

ನಂತರ ಪೊಲೀಸ್ ಅಧೀಕ್ಷಕರು ಮೈಸೂರು ಜಿಲ್ಲೆ ಮತ್ತು ಪೊಲೀಸ್ ಉಪಮಹಾನಿರೀಕ್ಷಕರು ದಕ್ಷಿಣ ವಲಯ ಮೈಸೂರು ರವರು ಕೂಡಲೇ ಸ್ಥಳಕ್ಕೆ ಭೇಟಿ ನೀಡಿರುತ್ತಾರೆ.

ದಿನಾಂಕ:10.07.2023 ರಂದು ಮೈಸೂರಿನ ಸರ್ಕಾರಿ ಮೆಡಿಕಲ್ ಶವಗಾರದಲ್ಲಿ ಮೃತ ವೇಣುಗೋಪಾಲ ರವರ ವೈದ್ಯಕೀಯ ಮರಣೋತ್ತರ ಶವಪರೀಕ್ಷೆ ನಡೆದಿದ್ದು, ನಂತರ ಮೃತ ದೇಹವನ್ನು ಅಂತ್ಯಸಂಸ್ಕಾರಕ್ಕಾಗಿ ಟಿ.ನರಸೀಪುರಕ್ಕೆ ತೆಗೆದುಕೊಂಡು ಹೋಗಿದ್ದು, ಅಂತ್ಯಸಂಸ್ಕಾರವು ಶಾಂತಿಯುತವಾಗಿ ಮುಗಿದಿರುತ್ತದೆ. ಈ ಸಮಯದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಈ ಪ್ರಕರಣದಲ್ಲಿ ಈಗಾಗಲೇ ಈ ಕೆಳಕಂಡ 06 ಆರೋಪಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ.

(1)ಮಣಿಕಂಠಸ್ವಾಮಿ @ ಮಣಿ @ ಕೂಳೆ ಮಣಿ ಬಿನ್ ಸಿದ್ದಪ್ಪ, (2) ಸಂದೇಶ ಕುಮಾರ್ ಬಿನ್ ಸ್ವಾಮಿನಾಥನ್, (3) ಅನಿಲ್ ಬಿನ್ ಲೇಟ್.ಮಹದೇವ, (4) ಶಂಕರ @ ಶಂಕರೇಗೌಡ @ ತುಪ್ಪ ಬಿನ್ ಮಹದೇವಪ್ಪ, (5) ಮಂಜು @ ಮಂಜುನಾಥ್ ಬಿನ್ ಪುಟ್ಟಸ್ವಾಮಿ, (6) ಹ್ಯಾರಿಸ್ @ ಮಹಮದ್ ಹ್ಯಾರಿಸ್ ಬಿನ್ ಸರ್ತಾಜ್ ಪಾಷ ರವರುಗಳನ್ನು ದಸ್ತಗಿರಿ ಮಾಡಿ ವಿಚಾರಣೆ ಮಾಡಲಾಗಿದ್ದು, ಮುಂದಿನ ತನಿಖೆ ಕೈಗೊಳ್ಳಲಾಗಿರುತ್ತದೆ.

ಈ ಘಟನೆಯು ವೈಯಕ್ತಿಕ ವಿಚಾರಗಳಿಗಾಗಿ ನಡೆದಿದ್ದು, ಮೃತ ವೇಣುಗೋಪಾಲ್ ಮತ್ತು ಆರೋಪಿಗಳು ಪರಿಚಿತರಾಗಿದ್ದು ಪರಸ್ಪರ ಒಡನಾಟದಿಂದ ಇದ್ದವರಾಗಿದ್ದು, ಕ್ಷುಲ್ಲಕ ಕಾರಣಕ್ಕಾಗಿ ಹಠಾತ್ತನೆ ಜಗಳ ಪ್ರಾರಂಭವಾಗಿದ್ದು ಪರಸ್ಪರ ಹೊಡೆದಾಟದಿಂದ ಈ ಘಟನೆ ಸಂಭವಿಸಿರುತ್ತದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿರುತ್ತದೆ.

ಟಿ.ನರಸೀಪುರ ಪಟ್ಟಣದಲ್ಲಿ ಹಾಲಿ ಶಾಂತ ಪರಿಸ್ಥಿತಿ ಇದ್ದು, ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳ ಗಸ್ತು ಮತ್ತು ಪಿಕೆಟಿಂಗ್ ಹಾಗೂ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮುಂದುವರೆಸಲಾಗಿದೆ.

---

**HD 18 SDN 2023**

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು